**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

**ಸಿ.ಸಿ.ನಂ:2134/2022**

ಸಿ.ಡಬ್ಲ್ಯೂ –7 ಪಿ.ಡಬ್ಲ್ಯೂ -4

| | | |
|---|---|---|
| ಹೆಸರು | : | ಸಂಜುಕುಮಾರ |
| ತಂದೆ:ಗಂಡ | : | ಮರೆಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | : | ಚಿಂಚೋಳಿ(ಬಿ) |

ದಿನಾಂಕ:15.11.2023

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ:**

ಆರೋಪಿತರ ಪರಿಚಯ ಇರುವುದಿಲ್ಲ, ಚಾಸಾ-1 ರಿಂದ 6 ರವರ ಪರಿಚಯ ಇರುವುದಿಲ್ಲ. ನನಗೆ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಪೋಲಿಸರು ಸಹಿ ಮಾಡು ಎಂದ ಕಾರಣ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಈಗ ಜಪ್ತಿ ಪಂಚನಾಮೆ ತೋರಿಸಿ ಅದರಲ್ಲಿರುವ ಸಹಿ ಗುರುತಿಸಿದ್ದು ಜಪ್ತಿ ಪಂಚನಾಮೆಯನ್ನು ನಿಪಿ-2, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾ ಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)**

**ಪಾಟೀ ಸವಾಲು : ಸ.ಸ.ಅ. ವಕೀಲರಿಂದ.**

ದಿ.18.11.2021 ರಂದು ಬೆಳಗ್ಗೆ 11.00 ರಿಂದ 12.00 ನನ್ನ ಸಮಕ್ಷಮ ಜಪ್ತಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ ಅಲ್ಲ. ನಾನು ಹಾಗೂ ಚಾಸಾ-6 ರವರು ಪಂಚನಾಮೆಗೆ ಓದಿ ತಿಳಿದುಕೊಂಡು ಸಹಿ ಮಾಡಿರುತ್ತೇವೆ ಎಂದರೆ ಸರಿ ಅಲ್ಲ. ನನ್ನ ಸಮಕ್ಷಮ 4 ಅಡಿ ಉದ್ದದ ಬಡಿಗೆ ಹಾಗೂ ಎಡಗಾಲಿನ ಚಪ್ಪಲಿಯನ್ನು ಜಪ್ತಿಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಜಪ್ತಿ ಪಂಚನಾಮೆ ಮಾಡಿದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆ:-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ.